ದಿಃ 21.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು ವಿ.ಎನ್ ರವರಿಂದ**

ಪುಲ್ಲಣ್ಣಾ ನನ್ನು ನಾನು ನೋಡಿಲ್ಲ. ಅವರ ಮಕ್ಕಳ ಹೆಸರು ನಾರಾಯಣಪ್ಪಾ ದಾಸಪ್ಪಾ ಮತ್ತು ಯಲ್ಲಪ್ಪಾ. ಈ ಮೂರು ಜನರು ವೆಂಕಟಪ್ಪನ ಮಕ್ಕಳು ಎಂದರೆ ಪುಲ್ಲ ವೆಂಕಟಪ್ಪರವರ ಮಕ್ಕಳು. ಪುಲ್ಲ ವೆಂಕಟಪ್ಪ ನಿಗೆ ಇಬ್ಬರು ತಮ್ಮಂದಿರು ಇದ್ದಾರೆ ಎಂದರೆ ಸರಿ. ಅವರೆಂದರೆ ಕುರ್ಲಪ್ಪಾ ಮತ್ತು ಯಲ್ಲಪ್ಪಾ. ವೆಂಕಟಪ್ಪಾ ಮತ್ತು ಅವರ ತಮ್ಮಂದಿರು 1975 ರಲ್ಲಿ ಅವರ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ.

2. ದಾವಾ ಸ್ವತ್ತು ಯಲ್ಲಪ್ಪ ನ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಯಲ್ಲಪ್ಪಾ ಅವಿವಾಹಿತ ಎಂದರೆ ಸರಿ. ಯಲ್ಲಪ್ಪಾರವರು 1979-80 ರಲ್ಲಿ ದಾವಾ ಸ್ವತ್ತನ್ನು 2 ನೇ ಪ್ರತಿವಾದಿ ಮತ್ತು ನಂಜಪ್ಪಾ ಎಂಬುವವರಿಗೆ ವಿಲ್ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆ 2008 ರ ವರೆಗೂ ಯಲ್ಲಪ್ಪನ ಹೆಸರಿಗೆ ಇತ್ತು ಎಂದರೆ ಸರಿ. ಯಲ್ಲಪ್ಪನಿಗೆ ಪೌತಿ ವಾರ್ಸಾ ಮುಖಾಂತರ ಖಾತೆ ಬಂದಿರುತ್ತದೆ ಯಲ್ಲಪ್ಪಾರವರಿಗೆ ವಿಭಾಗದ ಮುಖಾಂತರ ಖಾತೆ ಆಗಿರುತ್ತದೆ ಎಂದರೆ ಗೊತ್ತಿಲ್ಲ.

3. ದಾವಾ ಸ್ವತ್ತು ಮೊದಲು ವೆಂಕಟರಾಮಪ್ಪ ರವರಿಗೆ ಸೇರಿದ್ದು ಎಂದು ತೋರಿಸಲು ದಾಖಲೆ ನೀಡಿದ್ದೇನೆ. ವೆಂಕಟರಾಮಪ್ಪ ರವರ ತಂದೆ ಕುರ್ಲಪ್ಪರವರ ಹೆಸರಿನಲ್ಲಿ ಇದ್ದ ದಾಖಲೆಗಳನ್ನು ನೀಡಿದ್ದೇನೆ. ವಿಲ್ ಮುಖಾಂತರ ವೆಂಕಟರಾಮಪ್ಪನಿಗೆ ದಾವಾ ಸ್ವತ್ತು ಬಂದಿದೆ ಎಂದು ವಾದಪತ್ರದಲ್ಲಿ ಹೇಳಿಲ್ಲ. ದಾವಾ ಸ್ವತ್ತು ಯಲ್ಲಪ್ಪನಿಗೆ ಸೇರಿದ್ದು, ಕುರ್ಲಪ್ಪ ನ ಮಗ ವೆಂಕಟರಾಮಪ್ಪನಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

4. 25-30 ವರ್ಷಗಳಿಂದ ವೆಂಕಟರಾಮಪ್ಪ ಆಂಧ್ರದಲ್ಲಿ ವಾಸ ವಾಗಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವೆಂಕಟರಾಮಪ್ಪ ಸ್ವಾದೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳಿಗೆ ತೊಂದರೆ ನೀಡಲು ದಾಖಲಾತಿಗಳನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ.,
ಬಾಗೇಪಲ್ಲಿ